**ಕರ್ನಾಟಕ ಸರ್ಕಾರ**

**(ಅಬಕಾರಿ ಇಲಾಖೆ)**

ಸಂ: ಸಂ: ಇಎಕ್ಸ್‌ಇ/ಇಎಸ್‌ಟಿ/ವಾಚಾ/ನೇನೇ/37(ಭಾಗ-2)/2014-15

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಕೊಪ್ಪಳ ಜಿಲ್ಲೆ, ಕೊಪ್ಪಳ
ದಿನಾಂಕ: 12-01-2018.

## :: ಅಧಿಸೂಚನೆ ::

**ವಿಷಯ:** ಕೊಪ್ಪಳ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 03 ವಾಹನ ಚಾಲಕರ ಹುದ್ಧೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಅರ್ಜಿ ಆಹ್ವಾನ.

**ಉಲ್ಲೇಖ:** 1) ಈ ಕಛೇರಿಯ ಇದೇ ಕ್ರಮಾಂಕದ ಅಧಿಸೂಚನೆ ದಿನಾಂಕ: 06-11-2015,
2) ಮಾನ್ಯ ಅಬಕಾರಿ ಆಯುಕ್ತರು, ಬೆಂಗಳೂರು ಇವರ ಪತ್ರ ಸಂ: ಇಸಿಇ/11/ವಾಚಾ/ಎಪಿಟಿ/2013, ದಿನಾಂಕ: 17-11-2014,
3) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂ: ಡಿಪಿಎಆರ್/13/ಎಸ್‌ಬಿಸಿ/2001, ದಿನಾಂಕ:21-11-2001,
4) ಸರ್ಕಾರದ ಆದೇಶ ಸಂ: ಎಫ್‌ಡಿ/31/ಇಪಿಎಸ್/99, ದಿನಾಂಕ: 03-07-1999,
5) ಸರ್ಕಾರದ ಅ.ಜ್ಞಾ.ಪ ಸಂ:ಸಿಆಸುಇ/33/ಹೈ.ಕ/2014, ದಿನಾಂಕ:10-04-2014,
6) ಅಬಕಾರಿ ಆಯುಕ್ತರು, ಬೆಂಗಳೂರು ಇವರ ಪತ್ರ ಸಂ: ಇಸಿಇ/11/ವಾಚಾ/ನೇಮಕಾತಿ/2013, ದಿನಾಂಕ: 27-06-2017.

---(())---

ಕೊಪ್ಪಳ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 03 ವಾಹನ ಚಾಲಕರ ಹುದ್ಧೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತಾದ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯು ದಿನಾಂಕ: 26-09-2017 ರಂದು ಸಭೆ ಸೇರಿ ಸಭೆಯಲ್ಲಿ ತೀರ್ಮಾನಿಸಿದಂತೆ ಈಗಾಗಲೇ ವಾಹನ ಚಾಲಕರ ನೇಮಕಾತಿಗಾಗಿ ಉಲ್ಲೇಖ (1) ರಂತೆ ಹೊರಡಿಸಲಾಗಿದ್ದ ಇದೇ ಕ್ರಮಾಂಕದ ದಿನಾಂಕ: 06-11-2015ರ ಅಧಿಸೂಚನೆಯನ್ನು ಆಯ್ಕೆ ಪ್ರಕ್ರಿಯೆಯ ತಾಂತ್ರಿಕ ಕಾರಣಗಳಿಂದ ಹಿಂಪಡೆಯಲಾಗಿದೆ. ಈ ಅಧಿಸೂಚನೆ ಪ್ರಕಾರ ಈಗಾಗಲೇ ಸಲ್ಲಿಸಿರುವ ಅಭ್ಯರ್ಥಿಗಳು ಪ್ರಸ್ತುತ ಹೊರಡಿಸಿರುವ ಅಧಿಸೂಚನೆ ಅನ್ವಯ ಮತ್ತೊಮ್ಮೆ ಅರ್ಜಿ ಸಲ್ಲಿಸತಕ್ಕದ್ದು, ಈ ಮೊದಲು ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಉಲ್ಲೇಖ (2) ರ ಆದೇಶದಲ್ಲಿ ಮಾನ್ಯ ಅಬಕಾರಿ ಆಯುಕ್ತರು, ಬೆಂಗಳೂರು ಇವರು ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ಧೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಗೆ 3 (ಮೂರು) ವಾಹನ ಚಾಲಕರ ಹುದ್ಧೆಗಳನ್ನು ಭರ್ತಿ ಮಾಡಲು ಸೂಚಿಸಿರುವುದರಿಂದ ಉಲ್ಲೇಖ(3), (4) ಮತ್ತು (5) ರಲ್ಲಿನ ಮಾರ್ಗಸೂಚಿಗಳನ್ವಯ ಹಾಗೂ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳು, ಪ್ರಚಲಿತ ಸರ್ಕಾರಿ ನಿಯಮಗಳು, ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು-2006 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ನಿಯಮಗಳ ಅಡಿಯಲ್ಲಿ ಸದರಿ ಹುದ್ಧೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಹುದ್ಧೆಗಳ ವಿವರ ಮತ್ತು ವೇತನ ಶ್ರೇಣಿ :**
   **ಅ) ವಾಹನ ಚಾಲಕ: 03 ಹುದ್ಧೆಗಳು,**
   **ಆ) ವೇತನ ಶ್ರೇಣಿ** :- ರೂ. 11600-200-12000-250-13000-300-14200-350-15600-400-17200-450-19000-500-21000

2. **ಹುದ್ಧೆಯ ವರ್ಗೀಕರಣ :-**
   **ಅ) ಹೈದರಾಬಾದ್-ಕರ್ನಾಟಕ (371 ಜೆ) ವೃಂದ**

| ವರ್ಗಗಳು (ಅಭ್ಯರ್ಥಿ) | ಇತರೆ | | ಮ.ಅ | | ಗ್ರಾ. ಅ | | ಮಾ. ಸೈ | | ಕ.ಮಾ.ಅ | | ಯೋ.ಅ | | ಅಂ.ವಿ | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | 371ಜೆ | ಇತರೆ | 371ಜೆ | ಇತರೆ | 371ಜೆ | ಇತರೆ | 371ಜೆ | ಇತರೆ | 371ಜೆ | ಇತರೆ | 371ಜೆ | ಇತರೆ | 371ಜೆ | ಇತರೆ | 371ಜೆ | ಇತರೆ |
| ಸಾ.ಅ | – | – | 01 | – | – | – | – | – | – | – | – | – | – | – | 01 | – |
| ಪ.ಪಂ | – | – | – | – | 01 | – | – | – | – | – | – | – | – | – | 01 | – |
| ಸಾ.ಅ | 01 | – | – | – | – | – | – | – | – | – | – | – | – | – | 01 | – |
| ಒಟ್ಟು | 01 | – | 01 | – | 01 | – | – | – | – | – | – | – | – | – | 03 | – |

ರೋಸ್ಟರ್ ಬಿಂದು 2 ರಿಂದ 4

3 ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು-1977 ರ ನಿಯಮ 9 (1-ಬಿ) ಪ್ರಕಾರ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದ ಪಕ್ಷದಲ್ಲಿ ಅದೇ ಪ್ರವರ್ಗದ ಇತರೆ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ 1977 ರ ನಿಯಮ 9ರ ಪ್ರಕಾರ ವಾಹನ ಚಾಲಕರ ಹುದ್ಧೆಗೆ ಅಂಗವಿಕಲ ಅಭ್ಯರ್ಥಿಗಳಿಗೆ ಅವಕಾಶವಿಲ್ಲದ ಕಾರಣ ಅಂಗವಿಕಲರಿಗೆ ಮೀಸಲಿದ್ದ ಹುದ್ಧೆಗಳನ್ನು ಅದೇ ವರ್ಗದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

/ಮುಂದುವರೆದಿದೆ-2

4. **ಅರ್ಹತೆಗಳು :-**
   ಅ) 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.
   ಆ) ಚಾಲ್ತಿಯಲ್ಲಿರುವ ಲಘು ವಾಹನ ಚಾಲನಾ ಪರವಾನಿಗೆಯನ್ನು ಹೊಂದಿರಬೇಕು.
   ಇ) ಚಾಲ್ತಿಯಲ್ಲಿರುವ ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರವನ್ನು ಹೊಂದಿರಬೇಕು.
   ಈ) ದೇಹದಾರ್ಢ್ಯತೆ ಪ್ರಮಾಣ ಪತ್ರ (Physical Standard /Fitness Certificate) ಹೊಂದಿರಬೇಕು.

5. **ಹಿಂಚಣಿ ಸೌಲಭ್ಯ** : ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ(ಎಸ್‌ಪಿಎಲ್)04/ಪಿಇಟಿ/2005, ದಿನಾಂಕ: 31-03-2005 ರಂತೆ

6. **ದೇಹದಾರ್ಢ್ಯತೆ :**
ಅಬಕಾರಿ ಇಲಾಖೆಯ ವಾಹನನ ಚಾಲಕ ಹುದ್ದೆಗೆ ಈ ಕೆಳಕಂಡ ದೇಹದಾರ್ಢ್ಯತೆ ನಿಗದಿಪಡಿಸಿದ್ದು ಅಂತಹ ದೇಹ ದಾರ್ಢ್ಯತೆ ಹೊಂದಿಲ್ಲದಂತಹ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.

| ಕ್ರ.ಸಂ: | ಅಭ್ಯರ್ಥಿಯ ಅಂಗಾಂಗದ ಸುತ್ತಳತೆ | ಪುರುಷರಿಗೆ | ಮಹಿಳೆಯರಿಗೆ |
|---|---|---|---|
| 1 | ಎತ್ತರ | 163 ಸೇಂ. ಮೀ. | 157 ಸೇಂ.ಮೀ. |
| 2 | ಎದೆಯ ಸುತ್ತಳತೆ | ಕನಿಷ್ಟ-81 ಸೇಂ. ಮೀ. ವಿಸ್ತರಿಸಿದಾಗ ಕನಿಷ್ಟ 5 ಸೇಂ.ಮೀ. ಹೆಚ್ಚಳವಾಗಬೇಕು. | ತೂಕ 49.9 ಕೆ.ಜಿ |
| 3 | ದೃಷ್ಟಿ ಸಾಮಾರ್ಥ್ಯ | ದೃಷ್ಟಿ ಸಾಮರ್ಥ್ಯ-6/9 ಅಥವಾ 6/12 | ದೃಷ್ಟಿ ಸಾಮರ್ಥ್ಯ-6/9 ಅಥವಾ 6/12 |

7. **ವಯೋಮಿತಿ :-**
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂದು ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು,

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 : ಕನಿಷ್ಟ 18 ವರ್ಷ, ಗರಿಷ್ಟ 40 ವರ್ಷ
ಆ) ಸಾಮಾನ್ಯ ವರ್ಗ : ಕನಿಷ್ಟ 18 ವರ್ಷ, ಗರಿಷ್ಟ 35 ವರ್ಷ
ಇ) ಇತರೆ ಹಿಂದುಳಿದ ವರ್ಗಗಳು (2ಎ, 2ಬಿ, 3ಎ & 3ಬಿ) : ಕನಿಷ್ಟ 18 ವರ್ಷ, ಗರಿಷ್ಟ 38 ವರ್ಷ
ಈ) ಅಭ್ಯರ್ಥಿಯು ಮಾಜಿ ಸೈನಿಕರಾಗಿದ್ದಲ್ಲಿ ಅವರ ಪ್ರವರ್ಗಕ್ಕೆ ನಿಗಧಿಪಡಿಸಿದ ಗರಿಷ್ಟ ವಯೋಮಿತಿಗೆ ಅವರು ಸಶಸ್ತ್ರ ದಳಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿವರೋ ಆ ವರ್ಷಗಳಿಗೆ 3 ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳ ವಿನಾಯಿತಿ ನೀಡಲಾಗಿದೆ.

8. **ಜಾತಿ/ಮೀಸಲಾತಿ** : ಮೀಸಲಾತಿ ಕೋರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರವರಿಂದ ನಮೂನೆ-ಡಿ ರಲ್ಲಿ, ಪ್ರವರ್ಗ-1 ರ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರವರಿಂದ ನಮೂನೆ-ಇ ರಲ್ಲಿ, ಇತರೆ ಹಿಂದುಳಿದ ವರ್ಗಗಳ ಅಂದರೆ 2ಎ, 2ಬಿ, 3ಎ & 3ಬಿ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರವರಿಂದ ನಮೂನೆ-ಎಫ್ ರಲ್ಲಿ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ ಲಗತ್ತಿಸುವುದು.

9. **ಹೈದರಾಬಾದ್-ಕರ್ನಾಟಕ** : ವ್ಯಾಪ್ತಿಯ ಅಭ್ಯರ್ಥಿಗಳಿಗೆ 371-ಜೆ ರನ್ವಯ 03 ಹುದ್ದೆಗಳನ್ನು ಮೀಸಲಿಸಲಾಗಿದ್ದು, ಸದರಿ ಹುದ್ದೆಗಳು ಹೈದರಾಬಾದ್-ಕರ್ನಾಟಕ ವ್ಯಾಪ್ತಿಗೆ ಸೇರಿದ್ದು, ಈ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಹೊಂದಿರುವ ಅಭ್ಯರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

10. **ಅರ್ಜಿ ಶುಲ್ಕ :**

| | |
|---|---|
| ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), ಮತ್ತು 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ | 10/- ರೂ, |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ಯಾವುದೇ ಶುಲ್ಕ ಇರುವುದಿಲ್ಲ. |

ಅರ್ಜಿ ಶುಲ್ಕವನ್ನು ಇಂಡಿನ್ ಪೋಸ್ಟಲ್ ಆರ್ಡರ್ ರೂಪದಲ್ಲಿ ಸಲ್ಲಿಸುವುದು, ಪೋಸ್ಟಲ್ ಆರ್ಡರ್ ಅನ್ನು **ಅಬಕಾರಿ ಉಪ ಆಯುಕ್ತರು ಕೊಪ್ಪಳ** ಇವರ ಹೆಸರಿನಲ್ಲಿ ಪಡೆಯತಕ್ಕದ್ದು, ಪೋಸ್ಟಲ್ ಆರ್ಡರ್ ಅನ್ನು ಅರ್ಜಿ ಸಲ್ಲಿಸುವ ದಿನಾಂಕದ ಪೂರ್ವದ 15 ದಿನಗಳಂದ ಈಚೆಗೆ ಪಡೆದಿರತಕ್ಕದ್ದು.

11. **ಅರ್ಜಿ ನಮೂನೆ** : ಅರ್ಜಿ ನಮೂನೆಯನ್ನು **http://koppal.nic.in website** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ **ದಿನಾಂಕ: 20-02-2018** ರ ಸಾಯಂಕಾಲ 5:30 ಗಂಟೆಯೊಳಗಾಗಿ ಖುದ್ದಾಗಿ ಅಥವಾ ಸಾಮಾನ್ಯ ಅಂಚೆಯ ಮೂಲಕ **ಸದಸ್ಯ ಕಾರ್ಯದರ್ಶಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಜಿಲ್ಲಾಡಳಿತ ಭವನ, ಹೊಸಪೇಟಿ ರೋಡ್, ಕೊಪ್ಪಳ** ಈ ವಿಳಾಸಕ್ಕೆ ಸ್ವೀಕೃತವಾಗುವಂತೆ ಸಲ್ಲಿಸುವುದು. **ನಿಗಧಿತ ಅಂತಿಮ ದಿನಾಂಕ ಹಾಗೂ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

ಮುಂದುವರೆದಿದೆ-3

**12. ಭರ್ತಿ ಮಾಡಲಾದ ಅರ್ಜಿಯೊಂದಿಗೆ ಸಲ್ಲಿಸಬೇಕಾದ ಮಾಹಿತಿ/ದಾಖಲಾತಿಗಳು:**

ಎ) ಹುದ್ದೆಗೆ ನಿಗದಿಪಡಿಸಲಾದ 7ನೇ ತರಗತಿಯ ಅಂಕಪಟ್ಟಿಯನ್ನು ಮಾತ್ರ ಸಲ್ಲಿಸುವುದು, (7ನೇ ತರಗತಿಯಲ್ಲಿ ಪಡೆದ ಅಂಕಗಳ ಪಟ್ಟಿಯನ್ನು ಸಲ್ಲಿಸುವುದು, ಗ್ರೇಡ್ ಕಾರ್ಡ್/ಕ್ಯೂಮುಲೇಟಿವ್ ಕಾರ್ಡ್/ಪ್ರಗತಿ ಪತ್ರ ಇತ್ಯಾದಿ ಇವುಗಳನ್ನು ಪರಿಗಣಿಸಲಾಗುವುದಿಲ್ಲ. ಅಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಶಿಕ್ಷಣಾಧಿಕಾರಿಗಳಿಂದ ಪರಿವರ್ತಿಸಿದ ಅಂಕಪಟ್ಟಿಯನ್ನು ಮಾತ್ರ ಕಡ್ಡಾಯವಾಗಿ ಪಡೆದು ಸಲ್ಲಿಸತಕ್ಕದ್ದು)

ಬಿ) ಚಾಲ್ತಿಯಲ್ಲಿರುವ ಲಘು ಮೋಟಾರು ವಾಹನ ಚಾಲನಾ ಪರವಾನಿಗೆ,

ಸಿ) ನಿಗದಿತ ದೇಹದಾರ್ಢ್ಯತೆ ಹೊಂದಿರುವ ಬಗ್ಗೆ ಜಿಲ್ಲಾ ಶಸ್ತ್ರ ಚಿಕಿತ್ಸಕರು ನೀಡಿದ ವೈದ್ಯಕೀಯ ಪ್ರಮಾಣ ಪತ್ರ,

ಡಿ) ಜನ್ಮ ದಿನಾಂಕವನ್ನು ನಮೂದಿಸಿರುವ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಅಥವಾ ಇತರೆ ಯಾವುದೇ ನಿಗದಿತ ದಾಖಲಾತಿ,

ಈ) ಮೀಸಲಾತಿ ಕೋರಿದ್ದಲ್ಲಿ ತಹಶೀಲ್ದಾರವರಿಂದ ಪಡೆದ ಜಾತಿ ಪ್ರಮಾಣ ಪತ್ರ,

ಎಫ್) ಚಾಲ್ತಿಯಲ್ಲಿರುವ ಪ್ರಥಮ ಚಿಕಿತ್ಸೆ ಪ್ರಮಾಣ ಪತ್ರ,

ಜಿ) ಹೈದರಾಬಾದ್-ಕರ್ನಾಟಕ ಪ್ರದೇಶ ವ್ಯಾಪ್ತಿಗೆ ಒಳಪಡುವ ಕುರಿತು ಸಹಾಯಕ ಆಯುಕ್ತರು ನೀಡಿರುವ ಅನುಬಂಧ-ಎ ಪ್ರಮಾಣ ಪತ್ರ.

ಮೇಲ್ಕಂಡ ದಾಖಲಾತಿಗಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಭರ್ತಿ ಮಾಡಿದ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು, ಹುದ್ದೆಗೆ ಆಯ್ಕೆಗೊಂಡಲ್ಲಿ ಅದೇ ದಾಖಲಾತಿಗಳ ಮೂಲ ಪ್ರತಿಗಳನ್ನು ಪರಿಶೀಲನೆಗಾಗಿ ಹಾಜರು ಪಡಿಸತಕ್ಕದ್ದು.

**13. ಆಯ್ಕೆ ವಿಧಾನ :-**

ಅ) ಅಭ್ಯರ್ಥಿಗಳ ಆಯ್ಕೆಯನ್ನು ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯ ಅಂತಿಮ ತೀರ್ಮಾನದಂತೆ ರಾಜ್ಯ ಅಬಕಾರಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಾನುಸಾರ, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು-1977 ಹಾಗೂ ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳ 2006ರ ಅನುಸಾರ ಆಯ್ಕೆ ಮಾಡಲಾಗುವುದು. ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು 1977 ರ ನಿಯಮ (6ಐ) ರ ಪ್ರಕಾರ ವಿಧಿ ವಿಯರಿಗೆ 10 ವರ್ಷಗಳು ರಿಯಾಯಿತಿ

**ಆ) ನೇಮಕಾತಿ ಪ್ರಕ್ರಿಯೇಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ನಿಯಮಗಳಿಗೆ ಒಳಪಟ್ಟಿರುತ್ತದೆ.**

ಪುರಸ್ಕೃತಗೊಳ್ಳುವ ಒಟ್ಟು ಅರ್ಜಿಗಳಲ್ಲಿ 7ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಆಧಾರದಲ್ಲಿ 1:5 ಅನುಪಾತದಕ್ಕು ಅಭ್ಯರ್ಥಿಗಳನ್ನು ವೈದ್ಯಕೀಯ/ದೇಹದಾರ್ಢ್ಯತೆ ಹಾಗೂ ವಾಹನ ಚಾಲನಾ ಪರೀಕ್ಷೆಗೆ ಆಹ್ವಾನಿಸಿ, ಸದರಿ ಪರೀಕ್ಷೆಗಳಲ್ಲಿ ಅರ್ಹತೆ ಪಡೆಯುವ ಅಭ್ಯರ್ಥಿಗಳನ್ನು 1:3 ಅನುಪಾತದಲ್ಲಿ ಪೋಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆಗೆ ಡ್ರೈವಿಂಗ್ ನೈಪುಣ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆಗಾಗಿ ನಿಯೋಜಿಸಿ, ಸದರಿ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದುವ ಅಭ್ಯರ್ಥಿಗಳನ್ನು ಅಂತಿಮ ಆಯ್ಕೆಗೆ ಪರಿಗಣಿಸಿ, ಪ್ರವರ್ಗವಾರು ಅಭ್ಯರ್ಥಿಗಳು 7ನೇ ತರಗತಿಯಲ್ಲಿ ಪಡೆದಿರುವ ಅಂಕಗಳನ್ನೇ ಮಾನದಂಡವಾಗಿರಿಸಿಕೊಂಡು ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು. ಒಂದು ವೇಳೆ ಅವಶ್ಯಕ ಸಂಖ್ಯೆಯ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ 7ನೇ ತರಗತಿಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ ಇವರಿಗಿಂತ ಕೆಳಗಿನ ಮೆರಿಟ್ ಇರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

- **ಹೈದರಾಬಾದ್-ಕರ್ನಾಟಕ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳು ಅವರು 7ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಆಧಾರದಲ್ಲಿ ಮೊದಲ ಆದ್ಯತೆಯಾಗಿ ಸ್ಥಳೀಯ (371 ಜೆ) ವೃಂದಕ್ಕೆ ನೇಮಕಾತಿಗೆ ಪರಿಗಣಿಸಲಾಗುವುದು. ಒಂದು ವೇಳೆ ಸ್ಥಳೀಯ ವೃಂದದಲ್ಲಿ ನೇಮಕಾತಿಗೆ ಅರ್ಹರಾಗದಿದ್ದಲ್ಲಿ ಸ್ಥಳೀಯೇತರ (ಇತರೆ) ವೃಂದಕ್ಕೆ ಪರಿಗಣಿಸಲಾಗುವುದು.**

**14. ಅರ್ಹತಾ ಷರತ್ತುಗಳು :-**

ಎ) ಅಭ್ಯರ್ಥಿಯು ಭಾರತೀಯ ನಾಗರೀಕನಾಗಿರತಕ್ಕದ್ದು,

ಬಿ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾಗಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು,

ಸಿ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದು ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯು ಕಾಯ್ದಿರಿಸಿಕೊಂಡಿದೆ.

ಡಿ) ನಿಗಧಿತ ಶೈಕ್ಷಣೀಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇರ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ,

**15. ವಿಶೇಷ ಸೂಚನೆಗಳು :-**

ಎ) ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಲಗತ್ತಿಸಿರುವ ಸೂಚನೆಗಳನ್ನು ತಪ್ಪದೇ ಗಮನಿಸತಕ್ಕದ್ದು,

ಬಿ) ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ,

ಸಿ) ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು,

ಮುಂದುವರೆದಿದೆ-4

ಡಿ) ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನೋಂದಾಯಿಸಿದ ಅರ್ಹ ಅಭ್ಯರ್ಥಿಗಳು ಸಹ ಈ ಅಧಿಸೂಚನೆಯ ಪ್ರಕಾರ ಅರ್ಜಿ ಸಲ್ಲಿಸಬಹುದಾಗಿದೆ.

ಇ) ಆಯ್ಕೆ ಪ್ರಾಧಿಕಾರವು ವಾಹನ ಚಾಲಕರ ಹುದ್ದೆಗಳನ್ನು ಭರ್ತಿ ಮಾಡುವ ಪೂರ್ಣ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ,

ಎಫ್) ಸರ್ಕಾರಿ ಇಲಾಖೆಯ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಪೂರ್ವಾನುಮತಿ ಪಡೆದಿರಬೇಕು,

ಜಿ) ಯಾವುದೇ ರೀತಿಯ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ,

ಹೆಚ್) ಮೀಸಲಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಜಾತಿ ಪ್ರಮಾಣದ ಪತ್ರದ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರದಲ್ಲಿ ನೇಮಕಾತಿ ಆದೇಶ ನೀಡಲಾಗುವುದು,

ಐ) ಅರ್ಜಿ ಸಲ್ಲಿಸುವ ಲಕೋಟೆಯ ಮೇಲೆ " ಅಬಕಾರಿ ಇಲಾಖೆಯ ವಾಹನ ಚಾಲಕರ ಹುದ್ದೆಯ ನೇಮಕಾತಿಗಾಗಿ" ಎಂದು ಸ್ಪಷ್ಟವಾಗಿ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು,

ಜೆ) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳುವುದು,

ಕೆ) ಅರ್ಜಿಯನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟಿದ್ದಲ್ಲಿ ನಂತರದ ಕಛೇರಿ ಕೆಲಸದ ದಿನದಂದು ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ.

ಎಲ್) ಅಧಿಸೂಚನೆಯಲ್ಲಿ ಪ್ರಕಟಿಸಿರುವ ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಗಳೊಳಗೆ ಕಡ್ಡಾಯವಾಗಿ ಪಡೆದುಕೊಂಡ ಅರ್ಹತೆಯನ್ನು ಹೊಂದಿರಬೇಕು,

ಎಮ್) ನೈತಿಕ ದುರ್ನಡತೆಯಿಂದಾಗಿ/ನೀತಿ ಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಇಲಾಖೆಯಲ್ಲಿ ಅಥವಾ ರಾಜ್ಯ/ಕೇಂದ್ರ/ಸ್ಥಳೀಯ ಸಂಸ್ಥೆ/ಕೈಗಾರಿಕಾ/ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ಇತರೆ ಕಛೇರಿಗಳಿಗೆ ನೈತಿಕ ದುರ್ನಡತೆಯಿಂದಾಗಿ/ನೀತಿ ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯ ಬದಲಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿನ ಕಾನೂನು ಬಾಹಿರ/ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದುಹಾಕಿದಲ್ಲಿ/ವಜಾ ಮಾಡಲ್ಪಟ್ಟಿದ್ದಲ್ಲಿ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ/ಅರ್ಜಿ ಸಲ್ಲಿಸಿದ್ದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು.

(ಶ್ರೀಮತಿ. ಎಂ ಕನಗವಲ್ಲಿ, ಭಾ.ಆ.ಸೇ)
ಅಧ್ಯಕ್ಷರು ನೇಮಕಾತಿ ಸಮಿತಿ,
ಹಾಗೂ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ.

ಪ್ರತಿಗಳನ್ನು:-

1. ಜಿಲ್ಲಾ ಸೂಚನಾ ವಿಜ್ಞಾನಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳರವರಿಗೆ ಜಿಲ್ಲೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
2. ಜಿಲ್ಲಾ ಉದ್ಯೋಗಾಧಿಕಾರಿಗಳು, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೊಪ್ಪಳ ಇವರಿಗೆ ಮಾಹಿತಿಗಾಗಿ ಹಾಗೂ ಅಧಿಸೂಚನೆ ಪ್ರತಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಮತ್ತು ತಮ್ಮಿಂದ ನೊಂದಾಯಿಸಲ್ಪಟ್ಟಿರುವ ಅರ್ಹ ಅಭ್ಯರ್ಥಿಗಳಿಗೆ ಅಧಿಸೂಚನೆಯಂತೆ ಕೊನೆಯ ದಿನನಾಂಕದೊಳಗೆ ಅರ್ಜಿ ಸಲ್ಲಿಸಲು ತಿಳುವಳಿಕೆ ನೀಡಲು ಕೋರಿದೆ.
3. ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ಜಿಲ್ಲೆ ಇವರಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
4. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಪ್ಪಳ ಜಿಲ್ಲೆ ಇವರಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
5. ಜಿಲ್ಲಾ ವಾರ್ತಾ ಹಾಗೂ ಪ್ರಚಾರಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಇವರಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
6. ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ, ಕೊಪ್ಪಳರವರಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
7. ರಾಜ್ಯದ ಎಲ್ಲಾ ವಿಭಾಗಗಳ ಜಂಟಿ ಆಯುಕ್ತರು ಮತ್ತು ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
8. ಮಾನ್ಯ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
9. ಕಛೇರಿ ಪ್ರತಿ/ಹೆಚ್ಚಿನ ಪ್ರತಿ.

## ಅಬಕಾರಿ ಇಲಾಖೆ ಕೊಪ್ಪಳ ಜಿಲ್ಲೆ, ಅಬಕಾರಿ ಉಪ ಆಯುಕ್ತರ ಹಾಗೂ ಅಧೀನ ಕಛೇರಿಗಳಲ್ಲಿನ ಖಾಲಿ ಇರುವ ವಾಹನ ಚಾಲಕರ ಹುದ್ದಗೆ ಅರ್ಜಿ

ಇತ್ತೀಚಿನ ಭಾವ ಚಿತ್ರ ಅಂಟಿಸುವುದು (ಪಾಸ ಪೋರ್ಟ ಅಳತೆ)

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು,
ಕೊಪ್ಪಳ ಜಿಲ್ಲೆ,
ಕೊಪ್ಪಳ.

ಮಾನ್ಯರೆ,

**ವಿಷಯ**:- ವಾಹನ ಚಾಲಕ ಹುದ್ದೆಗೆ ನೇಮಕಾತಿಗಾಗಿ ಅರ್ಜಿ ಸಲ್ಲಿಸುವ ಕುರಿತು.

**ಉಲ್ಲೇಖ**:-ತಮ್ಮ ಕಾರ್ಯಾಲಯದ ಅಧಿಸೂಚನೆ ಸಂ:ಇಎಕ್ಸ್ಇ/ಇಎಸ್‌ಟಿ/ವಾಚಾ/ನೇನೇ/37(ಭಾಗ-2)/2014-15 ದಿನಾಂಕ: -01-2018.

****

ಅರ್ಜಿ ಸಂಖ್ಯೆ: ಐ.ಪಿ.ಓ ನಂ.:

| | | | | | |
|---|---|---|---|---|---|
| 1. | ಅಭ್ಯರ್ಥಿಯ ಪೂರ್ಣ ಹೆಸರು<br>(7ನೇ ತರಗತಿಯ ಅಂಕಪಟ್ಟಿಯಲ್ಲಿರುವಂತೆ) | | | | |
| 2. | ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಪೂರ್ಣ ಹೆಸರು | | | | |
| 3. | ಪೂರ್ಣ ವಿಳಾಸ<br>ಪೋಸ್ಟ್<br>ತಾಲ್ಲೂಕಾ<br>ಜಿಲ್ಲೆ<br>ಪಿನ್ ಕೋಡ್ | | | | |
| 4. | ದೂರವಾಣಿ/ ಮೊಬೈಲ್ ಸಂ | | | | |
| 5. | ಉದ್ಯೋಗ ವಿನಿಮಯ ಕಛೇರಿ ನೊಂದಣಿ ಸಂಖ್ಯೆ (ಇದ್ದಲ್ಲಿ ಮಾತ್ರ) | | | | |
| 6. | ಲಿಂಗ | ಪುರುಷ / ಮಹಿಳೆ | | | |
| 7 | ಇಲಾಖಾ ಅಭ್ಯರ್ಥಿಯೇ | ಹೌದು / ಇಲ್ಲ | | | |
| 8 | ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ<br>(7ನೇ ತರಗತಿಯ ಅಂಕಗಳ ವಿವರ) (ಪ್ರತಿಶತ %) | | | | |
| | **ವಿದ್ಯಾರ್ಹತೆ** | **ಗರಿಷ್ಠ ಒಟ್ಟು ಅಂಕಗಳು** | **ಗಳಿಸಿದ ಒಟ್ಟು ಅಂಕಗಳು** | **ಶೇಕಡಾ (%)** | |
| | ಅ) 7ನೇ ತರಗತಿ | | | | |
| 9 | ಮೀಸಲಾತಿ ವರ್ಗ<br>(ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು) | ಪರಿಶಿಷ್ಟ ಪಂಗಡ/ಸಾಮಾನ್ಯ | | | |
| 10 | ಕನ್ನಡ ಭಾಷಾ ಜ್ಞಾನ : | ಪ್ರಥಮ / ದ್ವಿತೀಯ / ತೃತೀಯ/ ಇಲ್ಲ | | | |
| 11 | ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ (371 ಜೆ) ಅಭ್ಯರ್ಥಿಯೇ?<br>ಹೌದಾದಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ದೃಢೀಕೃತ ಪತ್ರವನ್ನು ಲಗತ್ತಿಸುವುದು. | ಹೌದು/ಇಲ್ಲ | | | |

| | | |
|---|---|---|
| 12 | ಜನ್ಮ ದಿನಾಂಕ: | / / <br><br>(ಅಂಕಪಟ್ಟಿ / ಶಾಲಾ ವರ್ಗಾವಣೆ ಪತ್ರದಲ್ಲಿ ಇರುವಂತೆ ನಮೂದಿಸುವುದು.)<br>ಜನ್ಮ ಸ್ಥಳ : __________<br>ತಾಲ್ಲೂಕು :___________<br>ಜಿಲ್ಲೆ :____________<br>ವಯಸ್ಸು : ___________ |
| 13 | ಹುದ್ದೆಗೆ ನಿಗದಿಪಡಿಸಿರುವ ದೇಹದಾರ್ಢ್ಯತೆ ಹೊಂದಿರುವಿರಾ (ಹೊಂದಿದ್ದಲ್ಲಿ ಜಿಲ್ಲಾ ಸರ್ಜನ್‌ರವರಿಂದ ಪಡೆದ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು) | ಹೌದು /ಇಲ್ಲ |
| 14 | ಚಾಲ್ತಿಯಲ್ಲಿರುವ ಲಘು ವಾಹನ ಚಾಲನಾ ಪರವಾನಿಗೆ ಹೊಂದಿರುವಿರಾ (ಹೊಂದಿದ್ದಲ್ಲಿ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು) | ಹೌದು / ಇಲ್ಲ |
| 15 | ನೀವು ಈ ಹಿಂದೆ ಸರ್ಕಾರದ ಅಥವಾ ಸರ್ಕಾರಿ ಸ್ವಾಮ್ಯದ ಯಾವುದಾದರೂ ಸೇವೆಯಿಂದ ವಜಾ ಮಾಡಲ್ಪಟ್ಟಿದ್ದೀರಾ | |
| 16 | ಲಗತ್ತಿಸಿದ ದಾಖಲಾತಿಗಳ ವಿವರ | |
| 17 | ಎಲ್ಲಾ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿರುವಿರಾ? | ಹೌದು/ಇಲ್ಲ |

**ಘೋಷಣಾ ಪತ್ರ**

ಶ್ರೀ ________________________________ ಆದ ನಾನು ಅರ್ಜಿ ಸಲ್ಲಿಸಿರುವ ಹುದ್ದೆಗೆ ಜಾಹೀರಾತಿನಲ್ಲಿ ನಿಗದಿಪಡಿಸಿರುವ ಎಲ್ಲಾ ಅರ್ಹತೆಯನ್ನು ಹೊಂದಿರುತ್ತೇನೆ. ಅರ್ಜಿಯನ್ನು ಸರಿಯಾಗಿ ಭರ್ತಿ ಮಾಡದಿದ್ದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸಬಹುದು. ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ಸತ್ಯವಾಗಿದ್ದು, ಪರಿಪೂರ್ಣವಾಗಿವೆ. ವಿವರಗಳು ಸುಳ್ಳಾಗಿ ಕಂಡು ಬಂದ ಪಕ್ಷದಲ್ಲಿ ನನ್ನನ್ನು ಯಾವಾಗಲಾದರೂ ಸೇವೆಯಿಂದ ಯಾವ ಮುನ್ಸೂಚನೆಯಿಲ್ಲದೆ ವಜಾ ಮಾಡುವುದರೊಂದಿಗೆ ಕ್ರಿಮಿನಲ್ ಮೊಕದ್ದಮ್ಮೆಗೆ ಕ್ರಮ ಕೈಗೊಳ್ಳಲು ಇಲಾಖೆಗೆ ಅಧಿಕಾರವಿದೆಯೆಂದು ತಿಳಿದಿದ್ದೇನೆ ಹಾಗೂ ನಾನು ಈವರೆಗೆ ಯಾವುದೇ ಕಾನೂನು ಬಾಹಿರ ಬಹುಪತಿ/ ಬಹು ಪತ್ನಿತ್ವ ಹೊಂದಿರುವುದಿಲ್ಲ ಸರ್ಕಾರಿ/ ಸರ್ಕಾರಿ ಸ್ವಾಮ್ಯದ ಇಲಾಖೆಗಳ ಸೇವೆಯಿಂದ ವಜಾಗೊಂಡಿರುವುದಿಲ್ಲ ಹಾಗೂ ಕ್ರಿಮಿನಲ್ ಮೊಕದ್ದಮ್ಮೆಗಳನ್ವಯ ವಿಚಾರಣೆ / ಶಿಕ್ಷೆಗೆ ಒಳಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: _____________ ಅಭ್ಯರ್ಥಿಯ ಸಹಿ

ಸ್ಥಳ : _____________

**ಸೂಚನೆಗಳು :-**

1. **ಅರ್ಜಿಯಲ್ಲಿ ಕೇಳಿರುವ ವಿವರಗಳನ್ನು ಅಭ್ಯರ್ಥಿಯು ಸ್ವಂತ ಕೈ ಬರಹದಲ್ಲಿ ಸ್ಪಷ್ಟವಾಗಿ ಭರ್ತಿ ಮಾಡತಕ್ಕದ್ದು.**
2. **ಅಭ್ಯರ್ಥಿಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ/ನಿಯಮಗಳಿಗೆ ಬದ್ಧನಾಗಿರತಕ್ಕದ್ದು.**
3. **ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ ಸಂಬಂಧಪಟ್ಟ ಪ್ರಾಧಿಕಾರದಿಂದ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗಾಗಿ ಪ್ರಮಾಣ ಪತ್ರಗಳನ್ನು ಪಡೆದಿಟ್ಟುಕೊಂಡಿರಬೇಕು ಅವಧಿ ಮೀರಿದ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.**